# ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ.) ಸಿರಿಗೆರೆ

ಚಿತ್ರದುರ್ಗ ಜಿಲ್ಲೆ ದೂ: 08194–268829, ಇ–ಮೇಲ್: ao.taralabalu@gmail.com


**No. C5-270/S-2992/2019 & C6-125/S-2191/2019** ದಿನಾಂಕ **14.1.2019**

## ಅನುದಾನಿತ ಬೋಧಕ ಹುದ್ದೆಗಳ ನೇಮಕಾತಿ ಪ್ರಕಟಣೆ

ನಮ್ಮ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಕೆಳಕಂಡ ಬೋಧಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಪ್ರೌಢಶಾಲೆಗಳ ಖಾಲಿ ಹುದ್ದೆಗಳಿಗೆ ಇಲಾಖೆಯಿಂದ ಪಡೆದ ಅನುಮತಿ ಪತ್ರ ಸಂಖ್ಯೆ: ಇಡಿ 8 ಎಸ್‌ಇಪಿ 2014 ದಿನಾಂಕ 6.2.2015 ಮತ್ತು ಸಂಖ್ಯೆ: ಸಿ8(8)/ಶಾಶಿಅ.ಖಾಹುಭಅನು/53/2015–16 ದಿನಾಂಕ 30.10.2018. ಪದವಿ ಪೂರ್ವ ಕಾಲೇಜುಗಳ ಖಾಲಿ ಹುದ್ದೆಗಳಿಗೆ ಇಲಾಖೆಯಿಂದ ಪಡೆದ ಅನುಮತಿ ಪತ್ರ ಸಂಖ್ಯೆ: ಪಪೂಶಿ/ಸಿಬ್ಬಂದಿ–3/ಜಿಜಿ/ಉಹುಅನು/24/2014–15 ದಿನಾಂಕ 21.6.2018 ಮತ್ತು ಸಂಖ್ಯೆ: ಪಪೂಶಿ/ಸಿಬ್ಬಂದಿ–3/ಜಿಜಿ/ಉಹುಅನು/ 24/2014–15(ವಾಲ್ಯೂಂ–02) ದಿನಾಂಕ 13.11.2018.

### ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ದೈಹಿಕ ಶಿಕ್ಷಕರ ಹುದ್ದೆಗಳು

ಕನ್ನಡ (16), ಇಂಗ್ಲೀಷ್ (19), ಹಿಂದಿ (11), ಸಂಸ್ಕೃತ (2), ಪಿ.ಸಿ.ಎಂ (8), ಸಿ.ಬಿ.ಜಡ್ (11), ದೈ.ಶಿ (12)

**ಮೀಸಲಾತಿ / ಒಳಮೀಸಲಾತಿ** (Vertical / Horizontal Reservation)

| | ಸಹ ಶಿಕ್ಷಕರು (ಒಟ್ಟು–67) | ದೈಹಿಕ ಶಿಕ್ಷಕರು (ಒಟ್ಟು–12) |
|---|---|---|
| SC | ಮಹಿಳೆ–4, ಗ್ರಾಮೀಣ–3, ಅಂಗವಿಕಲ–1, ಮಾಜಿ ಸೈನಿಕ–1, ಸಾಮಾನ್ಯ–2 | ಮಾಜಿ ಸೈನಿಕ–1, ಸಾಮಾನ್ಯ–1 |
| ST | ಮಹಿಳೆ–1, ಗ್ರಾಮೀಣ–1 | - |
| Cat-1 | ಮಹಿಳೆ–1, ಗ್ರಾಮೀಣ–1 | - |
| 2 A | ಮಹಿಳೆ–3, ಗ್ರಾಮೀಣ–3, ಅಂಗವಿಕಲ–1, ಮಾಜಿ ಸೈನಿಕ–1, ಸಾಮಾನ್ಯ–2 | ಮಾಜಿ ಸೈನಿಕ–1, ಸಾಮಾನ್ಯ–1 |
| 2 B | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–1 | ಗ್ರಾಮೀಣ–1 |
| 3 A | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–1 | - |
| 3 B | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–1 | ಗ್ರಾಮೀಣ–1 |
| GM | ಮಹಿಳೆ–10, ಗ್ರಾಮೀಣ–9, ಕನ್ನಡ ಮಾಧ್ಯಮ–2, ಅಂಗವಿಕಲ–1, ಮಾಜಿ ಸೈನಿಕ–3, ನಿರಾಶ್ರಿತ–2 ಸಾಮಾನ್ಯ–6 | ಮಹಿಳೆ–1, ಗ್ರಾಮೀಣ–2, ಕನ್ನಡ ಮಾಧ್ಯಮ–1, ಮಾಜಿ ಸೈನಿಕ–1, ಸಾಮಾನ್ಯ–1. |

**ವಿದ್ಯಾರ್ಹತೆ:** ಸಹ–ಶಿಕ್ಷಕ ಅಭ್ಯರ್ಥಿಗಳಿಗೆ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ವಿಷಯದಲ್ಲಿ ಪದವಿ ಮತ್ತು ಶಿಕ್ಷಕ ತರಬೇತಿ (ಬಿ.ಇಡಿ.) ಪದವಿ / ತತ್ಸಮಾನ ವಿದ್ಯಾರ್ಹತೆ. ದೈಹಿಕ–ಶಿಕ್ಷಕ ಅಭ್ಯರ್ಥಿಗಳಿಗೆ ಅಂಗೀಕೃತ ವಿಶ್ವವಿದ್ಯಾನಿಲಯದ ಪದವಿ ಜೊತೆಗೆ ಬಿ.ಪಿ.ಇಡಿ.

### ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆಗಳು (ಒಟ್ಟು–26)

ಕನ್ನಡ (4), ಇಂಗ್ಲೀಷ್ (4), ಇತಿಹಾಸ (3), ಅರ್ಥಶಾಸ್ತ್ರ (4), ಸಮಾಜಶಾಸ್ತ್ರ (2), ಭೌತಶಾಸ್ತ್ರ (2), ರಸಾಯನಶಾಸ್ತ್ರ (4), ಜೀವಶಾಸ್ತ್ರ (3)

**ಮೀಸಲಾತಿ / ಒಳಮೀಸಲಾತಿ** (Vertical / Horizontal Reservation)

| | | | |
|---|---|---|---|
| SC | ಮಹಿಳೆ–1, ಗ್ರಾಮೀಣ–1, ಕನ್ನಡ ಮಾಧ್ಯಮ–2 | 2 B | ಅಂಗವಿಕಲ (ದೃಷ್ಟಿಮಾಂದ್ಯ)–1 |
| ST | ಗ್ರಾಮೀಣ–1 | 3 A | ಗ್ರಾಮೀಣ–1 |
| Cat-1 | ಅಂಗವಿಕಲ (ದೃಷ್ಟಿಮಾಂದ್ಯ)–1 | 3 B | ಗ್ರಾಮೀಣ–1, ಅಂಗವಿಕಲ (ದೃಷ್ಟಿಮಾಂದ್ಯ)–1 |
| 2 A | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–1 | GM | ಮಹಿಳೆ–4, ಗ್ರಾಮೀಣ–3, ಕನ್ನಡ ಮಾಧ್ಯಮ–1, ಅಂಗವಿಕಲ–1, ಮಾಜಿ ಸೈನಿಕ–1, ನಿರಾಶ್ರಿತ–1 ಸಾಮಾನ್ಯ–2 |

**ವಿದ್ಯಾರ್ಹತೆ:** ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಶೇಕಡ 55 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ತೇರ್ಗಡೆಯಾಗಿರಬೇಕು ಮತ್ತು ಬಿ.ಇಡಿ. ಪದವಿ ಹೊಂದಿರಬೇಕು.

# ಎಲ್ಲಾ ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು

1. **ನೇಮಕಾತಿ ವಿಧಾನ, ಮೀಸಲಾತಿ, ವಯೋಮಿತಿ, ವೇತನ ಶ್ರೇಣಿ:** ಇಲಾಖೆಯ ನಿಯಮವನ್ನು ಅನುಸರಿಸಲಾಗುವುದು ಹಾಗೂ ಈ ನೇಮಕಾತಿಗಳು ಸರ್ಕಾರ / ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತವೆ.
2. **ಅರ್ಜಿ ಶುಲ್ಕ (ಪ್ರೌಢಶಾಲೆ):** ರೂ. 800/– (ಎಸ್.ಸಿ., ಎಸ್.ಟಿ., ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ ರೂ.600/–).
3. **ಅರ್ಜಿ ಶುಲ್ಕ (ಪದವಿಪೂರ್ವ ಕಾಲೇಜು):** ರೂ. 1,000/– (ಎಸ್.ಸಿ., ಎಸ್.ಟಿ., ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ ರೂ.800/–).
4. **ಬ್ಯಾಂಕ್ ಡಿ.ಡಿ.:** ಅರ್ಜಿ ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ ಯಲ್ಲದೆ ಬೇರೆ ರೀತಿ ಸ್ವೀಕರಿಸಲಾಗುವುದಿಲ್ಲ. ಡಿ.ಡಿ.ಯನ್ನು **"Administrative Officer, S.T.J. Education Society, Sirigere, Chitradurga Dist"** ಈ ಹೆಸರಿಗೆ ಪಡೆದುಕೊಂಡಿರಬೇಕು.
5. **ಅರ್ಜಿ ಸಲ್ಲಿಸುವ ವಿಧಾನ:** ಅರ್ಜಿಗಳನ್ನು ಕಾರ್ಯಾಲಯದಿಂದ ಕೊಡಲಾಗುವುದಿಲ್ಲ. ಅಂತರ್ಜಾಲದ ತಾಣ www.apply.taralabalu.in ಈ ವಿಳಾಸದಲ್ಲಿ ಆನ್–ಲೈನ್ ಅರ್ಜಿಯನ್ನು ಭರ್ತಿ ಮಾಡುವುದು. ಈ ಅಂತರ್ಜಾಲ ವಿಳಾಸಕ್ಕೆ ಹೋಗುವುದಕ್ಕೂ ಮುನ್ನ ಮೇಲ್ಕಂಡ ಅರ್ಜಿ ಶುಲ್ಕದ ಡಿ.ಡಿ. ಯನ್ನು ಪಡೆದುಕೊಂಡಿರಬೇಕು. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವವರು ಪ್ರತಿ ಹುದ್ದೆಗೆ ಪ್ರತ್ಯೇಕ ಡಿ.ಡಿ.ಯನ್ನು ಪಡೆದಿರಬೇಕು. ಆನ್ ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ಮೇಲೆ ಅಂತರ್ಜಾಲದಿಂದಲೇ ಪ್ರಿಂಟ್ ಮಾಡಿಕೊಳ್ಳಬೇಕು. ಆ ಮುದ್ರಿತ ಪ್ರತಿಯೊಂದಿಗೆ (Hard copy – A4 size) ಮೇಲ್ಕಂಡ ಡಿ.ಡಿ ಯನ್ನು ಲಗತ್ತಿಸಿ **"ಆಡಳಿತಾಧಿಕಾರಿಗಳು, ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ), ಸಿರಿಗೆರೆ – 577 541, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ"** ಈ ವಿಳಾಸಕ್ಕೆ ಕಳುಹಿಸುವುದು.
6. ಪ್ರೌಢಶಾಲೆ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಒಂದು ಛಾಯಾ ಪ್ರತಿಯನ್ನು ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001 ಇವರಿಗೆ ಕಳುಹಿಸುವುದು
7. ಪದವಿಪೂರ್ವ ಕಾಲೇಜಿಗೆ ಅರ್ಜಿ ಸಲ್ಲಿಸುವವರು ಒಂದು ಛಾಯಾ ಪ್ರತಿಯನ್ನು ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012 ಇವರಿಗೆ ಕಳುಹಿಸುವುದು.
8. ಮೇಲ್ಕಂಡ ಅಂತರ್ಜಾಲ ತಾಣದಲ್ಲಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆ ಎರಡಕ್ಕೂ ಅವಕಾಶ ಕಲ್ಪಿಸಿಕೊಡಲಾಗಿದೆ.
9. ಮೀಸಲಾತಿ ಸೌಲಭ್ಯವನ್ನು ಪಡೆಯ ಬಯಸುವವರು ಸರ್ಕಾರದ ಮೀಸಲಾತಿ ಆದೇಶದನ್ವಯ ಎಲ್ಲಾ ಘೋಷಣಾ / ಪ್ರಮಾಣ ಪತ್ರಗಳ ಛಾಯಾ ಪ್ರತಿಗಳನ್ನು ತಪ್ಪದೇ ಲಗತ್ತಿಸುವುದು. ಆನ್ ಲೈನ್ ನಲ್ಲಿಯೂ Upload ಮಾಡುವುದು.
10. ಅಪೂರ್ಣ ಮಾಹಿತಿ ಹಾಗೂ ಹುದ್ದೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳು ಮತ್ತು ಅಂಕಪಟ್ಟಿ ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಆನ್‌ಲೈನ‌ನಲ್ಲಿ ಭರ್ತಿ ಮಾಡಿದ ಅರ್ಜಿಯ ಮುದ್ರಿತ ಪ್ರತಿಯನ್ನು ಎಲ್ಲಾ ಮೂಲ ದಾಖಲಾತಿಗಳ ಛಾಯಾ ಪ್ರತಿಗಳೊಂದಿಗೆ ದಿನಾಂಕ **6.2.2019** ರ ಒಳಗಾಗಿ ಸಂಸ್ಥೆಯ ಆಡಳಿತ ಕಛೇರಿಗೆ ತಲುಪುವಂತೆ ಕಳುಹಿಸುವುದು.
12. ಅರ್ಜಿ ಮತ್ತು ಡಿ.ಡಿ. ತಲುಪಿದೆಯೇ ಇಲ್ಲವೇ ಎಂಬುದನ್ನು ಆನ್ ಲೈನ್‌ನಲ್ಲಿ ನೋಡಿಕೊಳ್ಳುವುದು. ಸಕಾಲದಲ್ಲಿ ತಲುಪದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
13. ಸಂದರ್ಶನದ ದಿನಾಂಕ ಮತ್ತು ಸ್ಥಳವನ್ನು ಆನ್ ಲೈನ್‌ನಲ್ಲಿಯೇ ಪ್ರಕಟಿಸಲಾಗುವುದು.
14. ಸಂದರ್ಶನಕ್ಕೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ಹೆಸರುಗಳನ್ನು ಮಾತ್ರ ವಿದ್ಯಾಸಂಸ್ಥೆಯ ಅಂತರ್ಜಾಲದಲ್ಲಿನ "Status" page ನಲ್ಲಿ ಪ್ರಕಟಿಸಲಾಗುವುದು. ಅವರು ಸಂದರ್ಶನ ಪತ್ರವನ್ನು ಅಂತರ್ಜಾಲದಿಂದಲೇ ಪ್ರಿಂಟ್ ಮಾಡಿಕೊಳ್ಳುವುದು.
15. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಅಂತರ್ಜಾಲದಿಂದ ಮುದ್ರಿಸಿಕೊಂಡ ಸಂದರ್ಶನ ಪತ್ರ ಮತ್ತು ಎಲ್ಲಾ ಮೂಲ ದಾಖಲೆಗಳೊಂದಿಗೆ, ಸೂಚಿಸಿದ ಸ್ಥಳ, ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.
16. ಕಾಲ ಕಾಲಕ್ಕೆ ಕೊಡುವ ಹೆಚ್ಚಿನ ಮಾಹಿತಿಯನ್ನು ಅಂತರ್ಜಾಲದಲ್ಲಿ ನೋಡಿಕೊಳ್ಳುವುದು.

| | |
|---|---|
| **ಕೆ. ಕಂಚಪ್ಪ** | **ಪ್ರೊ|| ಎಸ್.ಬಿ. ರಂಗನಾಥ್** |
| **ಮುಖ್ಯ ಕಾರ್ಯನಿರ್ವಹಣಾಧಿಕಾರಿ** | **ಆಡಳಿತಾಧಿಕಾರಿ** |